**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.96/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | ನಿಯಾಜಅಹ್ಮದ ಆಲೂರ | ಸಿಡಬ್ಲ್ಯೂ | 1 |
| ತಂದೆ ಹೆಸರು | ಸುಲೇಮಾನ | ಪಿಡಬ್ಲ್ಯೂ | 1 |
| ವಯಸ್ಸು | 26 ವರ್ಷ | | |
| ಉದ್ಯೋಗ | ಖಾಸಗಿ ಉದ್ಯೋಗಿ | | |
| ವಾಸಸ್ಥಳ | ಬೆಳಗಾಲಪೇಟ | | |

**ದಿಃ 17.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1). ಚಾ.ಸಾ-4 ನನ್ನ ಸಹೋದರ, ಚಾ.ಸಾ-5 ನನ್ನ ತಾಯಿ , ಚಾ.ಸಾ-2,3,6 ರಿಂದ 10 ಮತ್ತು ಆರೋಪಿಗಳ ಪರಿಚಯ ಇರುತ್ತದೆ. ಆರೋಪಿಗಳು ಯಾವತ್ತೂ ನನಗಾಗಲೀ, ಚಾ.ಸಾ-4 ರಿಂದ 6 ರವರಿಗಾಗಲೀ, ಚಾ.ಸಾ-8 ರವರ ವೈವಾಹಿಕ ವಿಚಾರಕ್ಕೆ ಸಂಬಂದಪಟ್ಟಂತೆ ಅವರ ಮನೆಗೆ ಹೋದಾಗ ಯಾವುದೇ ವಸ್ತುಗಳಿಂದ ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿರುವದಿಲ್ಲ. ಈ ಸಂಬಂದವಾಗಿ ನಾವು ಯಾವುದೇ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುವದಿಲ್ಲ ಹಾಗೂ ಪೊಲೀಸರ ಮುಂದೆ ಯಾವುದೇ ದೂರನ್ನು ನೀಡಿರುವದಿಲ್ಲ ಮತ್ತು ಪೊಲೀಸರ ಮುಂದೆ ಯಾವುದೇ ಮರುಹೇಳಿಕೆ ನೀಡಿರುವದಿಲ್ಲ.

2) ದಿನಾಂಕಃ 30.12.2024 ರ ದೂರನ್ನು ನೋಡಿ ಸಾಕ್ಷಿಯು ಅದರಲ್ಲಿನ ತನ್ನ ಸಹಿ ಗುರುತಿಸಿದ್ದರಿಂದ, ಸದರಿ ದಾಖಲೆಯನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ನಿ.ಪಿ-1ರಲ್ಲಿ ಏನು ಬರೆಯಲಾಗಿದೆ ಎನ್ನುವ ವಿಷಯ ನನಗೆ ಗೊತ್ತಿರುವದಿಲ್ಲ ಮತ್ತು ಸದರಿ ದಾಖಲಾತಿಗೆ ನಾನು ಎಲ್ಲಿ, ಯಾವಾಗ ಸಹಿ ಮಾಡಿದ್ದೇನೆ ಎಂದು ಹೇಳಲು ಆಗುವದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ ಕ್ರಮ ಜರುಗಿಸಿ

ಯಾವುದೇ ವಸ್ತುಗಳನ್ನು ಜಪ್ತುದ್ತಿಪಡಿಸಿಕೊಂಡಿರುವದಿಲ್ಲ. ದಿನಾಂಕಃ 01.12.2024 ರ ಸ್ಥಳ ಮತ್ತು ಜಪ್ತು ಪಂಚನಾಮೆ ಸಾಕ್ಷಿ ನೋಡಿ ಅದರಲ್ಲಿನ ತನ್ನ ಸಹಿ ಗುರುತಿಸಿದ್ದರಿಂದ ಸದರಿ ದಾಖಲಾತಿಗಳನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು . ಎರಡು ದಾಖಲಾತಿಗಳಿಗೆ ನಾನು ಎಲ್ಲಿ ,ಯಾವಾಗ ಮತ್ತು ಯಾರ ಯಾರ ಸಮಕ್ಷಮ ಸಹಿ ಮಾಡಿದ್ದೇನೆ ಎಂದು ಹೇಳಲು ಆಗುವದಿಲ್ಲ. ಆ ಸಮಯದಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತು ಜಪ್ತುಪಡಿಸಿಕೊಂಡಿರುವದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಹಿ.ಸ.ಸ.ಅಭಿಯೋಜಕರಿಂದ.**

2) ನಿ.ಪಿ-1 ರಲ್ಲಿ ಬರೆದಿರುವ ಎಲ್ಲ ವಿಚಾರಗಳನ್ನು ಸಾಕ್ಷಿಗೆ ಓದಿ ಹೇಳಿ ಕೇಳಲಾಗಿ ಅದರಲ್ಲಿ ಬರೆದಿರುವಂತೆ ಆರೋಪಿಗಳು ನಮ್ಮಗಳ ಮೇಲೆ ಯಾವುದೇ ಕೃತ್ಯವನ್ನು ಎಸಗಿರುವದಿಲ್ಲ. ಹಲ್ಲೆಯ ಹಿನ್ನೆಲೆಯಲ್ಲಿ ನಾನಗಾಲೀ, ಚಾ.ಸಾ-4 ರವರಿಗಾಗಲೀ ಚಿಕಿತ್ಸೆ ಪಡೆದುಕೊಂಡಿರುವದಿಲ್ಲ. ಆರೋಪಿಗಳು ಕೃತ್ಯವೆಸಗಿದ ನಂತರ ನಾನು ಮತ್ತು ಚಾ.ಸಾ-4 ರವರು ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ನಂತರದಲ್ಲಿ ಚಾ.ಸಾ-4 ರವರು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದುಕೊಂಡಿದ್ದಾರೆ ಅಂದರೆ ಸರಿಯಲ್ಲ. ನಂತರದಲ್ಲಿ ನಿ.ಪಿ-1 ರಂತೆ ಪೊಲೀಸ ಠಾಣೆಗೆ ಹಾಜರಾಗಿ ನಾನು ಆರೋಪಿಗಳ ವಿರುದ್ಧ ದೂರು ನೀಡಿದ್ದೇನೆ ಅಂದರೆ ಸರಿಯಲ್ಲ.

5) ನಿ.ಪಿ-1 ರಂತೆ ದೂರು ನೀಡಿದ ನಂತರ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿದ್ದು, ನಾನು ತೋರಿಸಿದ ಸ್ಥಳದಲ್ಲಿ ಚಾ.ಸಾ-2 ಮತ್ತು 3 ರವರ ಸಮಕ್ಷಮ ನಿ.ಪಿ-2 ರಂತೆ ಸ್ಥಳ ಮತ್ತು ಜಪ್ತು ಪಂಚನಾಮೆ ಬರೆದು ಆರೋಪಿಗಳು

ಕೃತ್ಯಕ್ಕೆ ಬಳಸಿದ ಒಂದು ಕಟ್ಟಿಗೆಯ ರೀಪನ್ನು ಮತ್ತು ಒಂದು ಕಬ್ಬಿಣದ ರಾಡನ್ನು ಮುಂದಿನ ಕ್ರಮಕ್ಕಾಗಿ ಜಪ್ತುಪಡಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. ಆ ಸಮಯದಲ್ಲಿ ಜರುಗಿಸಲಾದ ನಿ.ಪಿ-2 ರಲ್ಲಿ ಎಲ್ಲ ವಿಷಯ ತಿಳಿದುಕೊಂಡು ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಅದೇ ದಿನ ಪೊಲೀಸರ ಮುಂದೆ ಮರುಹೇಳಿಕೆಯನ್ನು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಮರುಹೇಳಿಕೆಯನ್ನು ನಿ.ಪಿ-3 ಎಂದು ಗುರುತಿಸಲಾಯಿತು. ನಿ.ಪಿ-1 ರಂತೆ ದೂರು ನೀಡಿದ ನಂತರ ಆರೋಪಿಗಳು ನಮ್ಮ ಸಂಬಂದಿಕರಾದ ಕಾರಣ ಹಿರಿಯರ ಸಲಹೆಯಂತೆ ರಾಜಿ ಮಾಡಿಕೊಂಡಿದ್ದೇನೆ ಅಂದರೆ ಸರಿ. ಆದ ಕಾರಣ ನನಗೆ ನಿ.ಪಿ--1 ರಿಂದ 3 ದಾಖಲಾತಿಗಳ ಸಂಪೂರ್ಣ ಮಾಹಿತಿ ಇದ್ದರೂ ಆರೋಪಿಗಳನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.

ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು

ಹಾವೇರಿ.